ಪ್ರಕರಣಗಳ ಸಂಖ್ಯೆ

1. 146.97
2. 240.97 | ಧಾರವಾಡ ಜಿಲ್ಲಾ ವ್ಯಾಪ್ತಿಗೆ ಸಂಬಂಧಪಟ್ಟ ಪ್ರಕರಣಗಳು

3. 294.97 ಗದಗ ಜಿಲ್ಲಾ ವ್ಯಾಪ್ತಿಗೆ ಸಂಬಂಧಪಟ್ಟ ಪ್ರಕರಣ.

ಎಸ್.ಪಿ.ಡಿ.ಯಲ್ಲಿ ಸಿಮೆಂಟ್ ಖರೀದಿ ದರ ನಿಗದಿಪಡಿಸುವುದು.

2395(3118) ಶ್ರೀ ಪಾಟೀಲ್ ಡಿ.ಆರ್. (ಗದಗ್) :— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಎಸ್.ಪಿ.ಡಿ.ಯಲ್ಲಿ ಸಿಮೆಂಟ್ ಖರೀದಿ ದರ ನಿಗದಿಪಡಿಸಲಾಗಿದೆಯೇ;

ಆ) ನಿಗಧಿಪಡಿಸದಿದ್ದರೆ ನಿಗದಿ ಮಾಡಲು ಇರುವ ತೊಂದರೆಗಳೇನು;

ಇ) ಸಿಮೆಂಟ್ ದರ ನಿಗಧಿಗೊಳಿಸುವಲ್ಲಿ ಆಗಿರುವ ವಿಳಂಬದಿಂದ ಸರಕಾರಿ ಯೋಜನೆಗಳ ಅನುಷ್ಠಾನ ಕುಂಠಿತವಾಗಿಲ್ಲವೆ?

ಈ) ಸಿಮೆಂಟ್ ಖರೀದಿದರ ನಿಗಧಿಪಡಿಸಲು ಕಾಲಮಿತಿಗೆ ಒಳಪಟ್ಟು ಸರ್ಕಾರವು ಈಗಲಾದರೂ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಹಣಕಾಸು ಅಭಿವೃದ್ಧಿ ನಿಗಮದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಇರುವ ಯೋಜನೆಗಳು.

2396 (3119) ಶ್ರೀ ಪಾಟೀಲ್ ಡಿ.ಆರ್. (ಗದಗ್) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಕರ್ನಾಟಕ ನಗರ ಮೂಲಭೂತ ಸೌಕರ್ಯ ಹಾಗೂ ಹಣಕಾಸು ಅಭಿವೃದ್ಧಿ ನಿಗಮದಿಂದ ಕರ್ನಾಟಕದ ಹನ್ನೆರಡು ಪಟ್ಟಣ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ಯೋಜನೆಯನ್ನು ಕಾರ್ಯಗತಗೊಳಿಸುವ ಕಾರ್ಯಕ್ರಮ ಈಗ ಯಾವ ಹಂತದಲ್ಲಿದೆ.

ಅ) ಈ ಹನ್ನೆರಡು ನಗರಗಳ ಮೂಲಭೂತ ಸೌಕರ್ಯ ಅಭಿವೃದಿಗಾಗಿ ಇರುವ ಯೋಜನಾ ಅಂದಾಜು ಎಷ್ಟು? ನಗರವಾರು ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಉತ್ತರ : ಮಧ್ಯ ಕರ್ನಾಟಕದ 13 ನಗರ ಮತ್ತು ಪಟ್ಟಣಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳ ಅಭಿವೃದ್ಧಿಗೆ ವಿಶ್ವಬ್ಯಾಂಕಿನ ಆರ್ಥಿಕ ಸಹಾಯವನ್ನು ಪಡೆಯಲು ಪ್ರಸ್ತುತ ಈ ಪ್ರಸ್ತಾವನೆಯು ಈಗ ಪರಿಶೀಲನೆಯಲ್ಲಿದೆ. ಯೋಜನೆಯನ್ನು ರೂಪಿಸುವ ಕಾರ್ಯಚಟುವಟಿಕೆಗಳು ನಡೆಯುತ್ತಿವೆ ಮತ್ತು ಈಗಾಗಲೇ ಯೋಜನೆಗೆ ಸಂಬಂಧಪಟ್ಟ ಕೆಲವೊಂದು ಅಧ್ಯಯನಗಳು ಮುಗಿದಿರುತ್ತವೆ.

ಆ) ಈ ಯೋಜನೆಯು ಆರಂಭದ ಹಂತದಲ್ಲಿರುವುದರಿಂದ ಯೋಜನೆಯ ವೆಚ್ಚವನ್ನು ಇನ್ನೂ ನಿಚ್ಚಯಿಸಿರುವುದಿಲ್ಲ.

ಮುಂಡರಗಿ ತಾಲ್ಲೂಕು ಮುಂಡರಗಿ ಕೆರೆ ಕಾಮಗಾರಿ ಪ್ರಾರಂಭಿಸುವುದು.

2398 (1854) ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಮೂರು ಕೆರೆಗಳಲ್ಲಿ ಬಾಕಿ ಮೂರು ವರ್ಷಗಳಾದರೂ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು?

ಆ) ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೆರೆಯ ಕಾಮಗಾರಿಯ ಅಂದಾಜು ವೆಚ್ಚ ರೂ.240.00 ಲಕ್ಷಗಳ್ದು, ಕಳೆದ ಮೂರು ವರ್ಷಗಳಿಂದ ಪ್ರತಿಷತ 30ರ ಅನುದಾನವಿಲ್ಲದ ಕಾರಣ ಕೆಲಸವನ್ನು ಪ್ರಾರಂಭಿಸಲಾಗಿರುವುದಿಲ್ಲ.

2001-02 ನೇ ಸಾಲಿಗೆ 72.00 ಲಕ್ಷ ರೂ. ಪ್ರತಿಶತ 30ರ ಅನುದಾನ ದೊರೆಯುವುದರಿಂದ ಪ್ರಸಕ್ತ ವರ್ಷ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.